## ಇಲ್ಲಿಯವರೆಗೆ



ಅಪೂರ್ವಳ ಪರೀಕ್ಷೆ ಮುಗಿದಿತ್ತು. ಚಿಕ್ಕಮ್ಮ ವಸುಮತಿ ಊರಿಗೆ ಬರುವಂತೆ ಫೋನ್ ಮಾಡಿ ಕರೆಯುತ್ತಾರೆ. ಆದರೆ ಸ್ವಲ್ಪ ದಿನ ಇಲ್ಲೇ ಇದ್ದು ಬಿಡುವ ಯೋಚನೆ ಅಪೂರ್ವಳದ್ದು. ಡಾ. ಆದರ್ಶ ಫೋನ್ ಮಾಡಿ ಭೇಟಿಯಾಗಲು ಹೇಳುತ್ತಾನೆ. ಅವನ ಮಾತಿನಂತೆ ಅಪೂರ್ವ ಹೋಗಿ ಭೇಟಿಯಾದಾಗ ರೆಸ್ಟೋರೆಂಟ್‌ಗೆ ಹೋಗುತ್ತಾರೆ. ಅಲ್ಲಿ ಆದರ್ಶ ತನ್ನ ಪ್ರೇಮ ನಿವೇದನೆ ಮಾಡುತ್ತಾನೆ. ಇದು ಅಪೂರ್ವಳ ಮನಸ್ಸಿಗೆ ಹಿತವೆನಿಸುವುದಿಲ್ಲ. ಆಕೆಗೆ ಸೂರ್ಯನ ಮೇಲೆ ಮನಸ್ಸಿರುತ್ತದೆ. ಸೂರ್ಯನ ಹುಟ್ಟಿದಹಬ್ಬದ ದಿನ ದೇವಸ್ಥಾನದಲ್ಲಿ ಅನ್ನದಾನ, ಪೂಜೆ ನಡೆಯುತ್ತದೆ. ಅಪೂರ್ವ, ಸೂರ್ಯ ದೇವಸ್ಥಾನಕ್ಕೆ ಹೋಗುತ್ತಾರೆ. ಇತ್ತ ಸೂರ್ಯ ರಾಯರನ್ನು ಕಂಡರೆ ಸಿಟ್ಟಿಗೇಳುತ್ತಿದ್ದ. ಆತ ಜೈಲಿನಲ್ಲಿದ್ದಾಗ ರಾಯರು ಪ್ರತಿ ತಿಂಗಳು ರಾಯರು ಜೈಲಿಗೆ ಹೋಗಿ ದೂರದಿಂದ ನೋಡಿ ಬರುತ್ತಿದ್ದದ್ದು, ಹುಟ್ಟಿದ ಹಬ್ಬದ ದಿನ ಅಲ್ಲಿದ್ದವರಿಗೆಲ್ಲ ಸಿಹಿತಿಂಡಿ ಕೊಟ್ಟು ಬರುತ್ತಿದ್ದ ವಿಷಯ ತಿಳಿದು ಸೂರ್ಯನಿಗೆ ರಾಯರ ಮೇಲೆ ಪ್ರೀತಿ ಉಂಟಾಗಿ ತಂದೆಯ ಕ್ಷಮೆ ಕೇಳುತ್ತಾನೆ.

ತಿಳಿಸ್ತೀನಿ... ಆಗ ಅವ್ರೇ ಒಂದು ನಿರ್ಧಾರಕ್ಕೆ ಬರಲಿ...’ ಎಂದಾಗ ವಿಜಯಮ್ಮನ ಮುಖ ಅರಕ್ತವಾಯಿತು.

‘ಉಪಕಾರ ಸ್ಮರಣೆ ಇಲ್ಲದ ಜನ ನೀವು..’ ಎಂದು ಕಹಿಯಾಗಿ ನುಡಿದು ಅಲ್ಲಿಂದ ಹೊರ ನಡೆದಿದ್ದರು.

ರಾಯರು ತಗ್ಗಿಸಿದ ತಲೆ ಎತ್ತದಾದರು. ಅವರಿಗೂ ಮುಂದೇನು ಮಾಡಬೇಕೆಂದೇ ತೋಚದಂತಾಗಿತ್ತು. ವಸುಮತಿ, ಅಪೂರ್ವಳ ಹಾದಿಯನ್ನೇ ಕಾಯುತ್ತ ಕುಳಿತರು. ಕಾಲೇಜಿನಿಂದ ಮರಳುವಾಗ ಅವಳೊಂದಿಗೆ ಸೂರ್ಯನೂ ಜೊತೆಯಾಗಿ ಇದ್ದ.

ವಸುಮತಿಯ ಆಗಮನ ಅವಳಿಗೆ ಅಚ್ಚರಿಯುಂಟು ಮಾಡಿತ್ತು.

‘ಇದೇನು ಚಿಕ್ಕಮ್ಮ...? ಹೇಳದೇ ಬಂದು ಬಿಟ್ಟಿದ್ದೀರಾ...?’ ಸೂರ್ಯ ದೂರದಲ್ಲಿ ನಿಂತು ಅವರನ್ನು ಕಂಡು ಕೈಮುಗಿದ. ಅದರತ್ತ ಗಮನ ಹರಿಸದೇ, ಅವಳ ಕೈ ಹಿಡಿದು ಅವಳ ಕೋಣೆಗೆ ಕರೆ ತಂದು ಬಾಗಿಲು ಹಾಕಿಕೊಂಡರು.

‘ರಾಯರು ಫೋನ್ ಮಾಡಿ ತಿಳಿಸಿದ್ರು.. ನೀನು ಸೂರ್ಯನನ್ನು ಮದ್ವೆ ಆಗಲು ಹೊರಟಿದ್ಯಂತೆ... ನಿಜನಾ...?’

ಅಪೂರ್ವ ಹೌದೆನ್ನುವಂತೆ ತಲೆಯಾಡಿಸಿದಳು,

‘ನಿನ್ಗೆ ತಲೆಗಿಲೆ ಕೆಟ್ಟಿದ್ಯಾ? ಇಂಜಿನಿಯರಿಂಗ್ ಕಲೀತಿರೋ ಹುಡ್ಗೀ ನೀನು? ಬುದ್ದಿ ಬೇಡ್ವಾ ನಿನ್ಗೆ..? ಹೋಗಿ ಹೋಗಿ ಎಂಥ ಹುಡ್ಗನನ್ನು ಆರಿಸಿದ್ದೀಯಾ..?’ ಅಪೂರ್ವ ಅರ್ಥವಾಗದವಳಂತೆ,

‘ಸೂರ್ಯನಿಗೇನಾಗಿದೆ.. ಚಿಕ್ಕಮ್ಮಾ? ಚೆನ್ನಾಗಿ ಇದ್ದಾರಲ್ಲಾ...?’

‘ಅವ್ನ ಹಿನ್ನಲೆ ಗೊತ್ತು ತಾನೇ..?’

‘ಹಿನ್ನಲೆ ನನ್ಗೆ ಬೇಡಾ ಚಿಕ್ಕಮ್ಮ.. ಅವ್ರು ಈಗೇನಾಗಿದ್ದಾರೆ ಅನ್ನೋದಷ್ಟೆ ನನಗೆ ಮುಖ್ಯ...ಮುಂದೆ ಅವ್ರು ಹೇಗಿದ್ರೂ ನಾನು ಸಂಭಾಳಿಸ್ತೀನಿ ಅನ್ನುವ ವಿಶ್ವಾಸ ನನಗಿದೆ..’ ಅಪೂರ್ವ ನಿರ್ಭಿಡೆಯಾಗಿ ಉತ್ತರಿಸಿದಳು.

‘ನೀನು ಮುಂಚೆ ಹೀಗೆ ಇರಲಿಲ್ಲ ಅಪೂರ್ವ.. ಬಹಳ ಮಾತನಾಡಲು ಕಲಿತಿದ್ದೀಯಾ...’ ಅಪೂರ್ವಳ ಕಣ್ಣಲ್ಲಿ ನೀರಾಡಿತು. ಚಿಕ್ಕಮ್ಮನ ಎರಡೂ ಕೈಗಳನ್ನೂ ಬಳಸಿ, ‘ನನ್ನಿಂದ ನಿಮ್ಮ ಮನಸ್ಸಿಗೆ ನೋವಾದರೆ ಕ್ಷಮಿಸಿ ಚಿಕ್ಕಮ್ಮ.. ನನ್ನ ಬದುಕಿಗೆ ಸಾರಥಿಯಾದವರು ನೀವು.. ಇಷ್ಟು ಸಮಯ ನೀವು ನಡೆಸಿದಂತೆ ನಾನು ನಡ್ಕೊಂಡಿದ್ದೀನಿ.. ನನ್ನ ಆಸೆಗೆ ನೀವು ಎಂದೂ ಅಡ್ಡಿ ಪಡಿಸಲ್ಲ ಅಂತ ನಂಬಿಕೆ ನನಗಿದೆ.. ನಾನು, ಸೂರ್ಯ ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ದೀವಿ.. ಅವ್ರು ಕೊಲೆ ಮಾಡಿ ಜೈಲಿಗೆ ಹೋಗಿ ಬಂದವ್ರು.. ಅಪರಾಧದ ಹಿನ್ನಲೆ ಉಳ್ಳವರು ಅಂತ ನಿಮಗೆ ಅಳುಕು ಅಂತ ನನ್ಗೆ ಗೊತ್ತು... ಎಂದೋ, ತಿಳಿದೇ ಮಾಡದ ತಪ್ಪು.. ಅದಕ್ಕೆ ಅವ್ರು ಶಿಕ್ಷೆನೂ ಅನುಭವಿಸಿ ಬಂದಿದ್ದಾರೆ.. ಅದನ್ನೇ ನಾವು ಪರಿಗಣಿಸಿ ಜೀವನ ಪೂರ್ತಿ ಅವ್ರನ್ನು ಪ್ರತ್ಯೇಕವಾಗಿರಿಸಿ ಜರಿಯುವುದು ಅದಕ್ಕಿಂತಲೂ ದೊಡ್ಡ ಶಿಕ್ಷೆ ಅನ್ಸುತ್ತೆ ನನ್ಗೆ... ಮಾಡಿದ ತಪ್ಪಿಗೆ ಅವ್ರು ಪ್ರಾಯಶ್ಚಿತ್ತ ಪಟ್ಟಿದ್ದಾರೆ. ಅಷ್ಟು ಸಾಕು ನನ್ಗೆ...’ ಅಪೂರ್ವ ಎಲ್ಲವನ್ನೂ ಯೋಚಿಸಿ ನುಡಿದಂತಿತ್ತು.

‘ಆದ್ರೂ.. ನೀನು ದುಡುಕ್ತಾ ಇದ್ದೀಯಾ ಅಪೂರ್ವ.. ಬೇಡಾ ಮಗಳೇ.. ನನ್ಮಾತು ಕೇಳು...’ ವಸುಮತಿಯ ಅನುನಯದ ಸ್ವರ ಅಪೂರ್ವಳಿಗೆ ನಾಟಲೇ ಇಲ್ಲ.

‘ನಾನು ನಿರ್ಧರಿಸಿ ಆಗಿದೆ ಚಿಕ್ಕಮ್ಮಾ.. ದಯವಿಟ್ಟು ಮನಸ್ಪೂರ್ವಕ ಒಪ್ಪಿಗೆ ಕೊಡಿ’ ಎಂದಾಗ ವಸುಮತಿಯ ಬಾಯಿ ಕಟ್ಟಿತು. ಅವರ ಅಸಮಾಧಾನವನ್ನು ಗಣನೆಗೆ ಪರಿಗಣಿಸುವ ಮನಸ್ಥಿತಿಯಲ್ಲಿ ಅಪೂರ್ವ ಇರಲಿಲ್ಲ. ವಸುಮತಿಯನ್ನು ಆನಂತರ ಮಾತನಾಡಿಸುವ ಗೋಜಿಗೂ ಅಪೂರ್ವ ಹೋಗಲಿಲ್ಲ.

ಏಕಾಂತದಲ್ಲಿ ದೊರೆತಾಗ ಸೂರ್ಯ, ಅಪೂರ್ವಳಿಗೆ, ‘ನಿನ್ನ ಚಿಕ್ಕಮ್ಮನಿಗೆ ಈ ಮದ್ವೆ ಇಷ್ಟವಿದ್ದಂತಿಲ್ಲ’ ಎಂದ.

ಅದರ ಕಾರಣ ತಿಳಿದರೆ ಆತ ಬೇಸರಿಸಿಕೊಂಡಾನೆಂದು ಅವಳು ಮೌನವಾಗಿ ಕುಳಿತಳು. ಅವನೇ ಮುಂದುವರೆದು ನುಡಿದ, ‘ಕೊಲೆ ಮಾಡಿ ಬಂದವನ ಕೈ ಹಿಡೀಬೇಡ ಅಂತ ಬುದ್ದಿವಾದ ಹೇಳಿರಬೇಕಲ್ವಾ?’ ಎಂದ. ಅವನ ಮುಖದಂತೆ, ದನಿಯೂ ಖಿನ್ನವಾಯಿತು. ಹೃದಯದಲ್ಲೆದ್ದ ನೋವಿನ ಅಲೆ, ಮುಖದ ಭಾವಕ್ಕೂ ಅಪ್ಪಳಿಸಿತು.

ಅವನ ಕೈ ಒತ್ತಿ ಹಿಡಿದು, ‘ಸೂರ್ಯ ..ನೊಂದುಕೊಳ್ಳಬೇಡಿ..’ ಎಂದಷ್ಟೇ ಸಂತೈಸಲು ಸಾಧ್ಯವಾಯಿತು.

‘ಜೀವನದಲ್ಲಿ ತಿಳಿಯದೇ ಮೊದಲ ತಪ್ಪು.. ಹೀಗೆ ನೆರಳಾಗಿ ಕಾಡುತ್ತೆ ಅಂತ ಅಂದ್ಕೊಂಡಿರಲಿಲ್ಲ... ತಪ್ಪು ಆಗಿ ಹೋಗಿದೆ. ಪಶ್ಚಾತ್ತಾಪವೂ ಇದೆ.. ಏನೂ ತಪ್ಪು ಮಾಡದ ಅಮಾಯಕ ವ್ಯಕ್ತಿ ನನ್ನ ಕೈಲಿಂದ ಪ್ರಾಣ ಕಳ್ಕೊಂಡಿದ್ದಾರೆ.. ಆ ಅಪರಾಧಿ ಮನೋಭಾವ ಸದಾ ನನ್ನೊಳಗೆ ಕಿತ್ತು ತಿನ್ನುತ್ತಿದೆ..’ ಎಂದು ಎರಡೂ ಕೈಗಳಿಂದ ತಲೆಗೂದಲ ಜೊಂಪೆಯನ್ನು ಒತ್ತಿ ಹಿಡಿದು ಹಿಂಸೆ ಅನುಭವಿಸುತ್ತಿರುವಂತೆ ತಳಮಳಿಸಿದ.

‘ನಾನೇನು ಮಾಡಲಿ? ಆ ಪಾಪದಿಂದ ಹೇಗೆ ಮುಕ್ತನಾಗಲೀ? ಅದನ್ನು ಹೇಗೆ ಮರೆಯಲಿ? ಅದರಿಂದ ಆಚೆ ಬಂದು ಹೇಗೆ ಸಹಜವಾದ ಜೀವನ ನಡೆಸಲಿ?’ ಅವನ ಆರ್ದ್ರತೆ, ಯಾತನೆ ಅಪೂರ್ವಳ ಹೃದಯವನ್ನೂ ಸೋಕಿ ಅವಳನ್ನು ಕಲಕಿಬಿಟ್ಟಿತು .

‘ಈ ಪಶ್ಚಾತ್ತಾಪವೊಂದೇ ಸಾಕು ಸೂರ್ಯ... ನಿಮ್ಮ ಹೃದಯ ಪರಿಶುದ್ಧವಾಗಿದೆ ಎಂದು ತಿಳಿಯಲು.. ಜೀವನದ ಕೆಲವು ಅನುಭವಗಳು ನಮ್ಗೆ ಮರೆಯಲಾಗದ ಪಾಠವನ್ನೇ ಕಲಿಸಿ ಬಿಡುತ್ತೆ... ನೀವು ಮುಂಚೆ ಏನಾಗಿದ್ರಿ ಅನ್ನೋದು ನನ್ಗೆ ಮುಖ್ಯವಲ್ಲ.. ನೀವು ಈಗ ಏನಾಗಿದ್ದೀರಿ ಅನ್ನೋದು ಮುಖ್ಯ...ಈಗ ನೀವು ನನ್ನ ಪ್ರೀತಿಯ .. ನನ್ನ ಬದುಕಿಗೆ ಬೆಳಕು ನೀಡುವ ಸೂರ್ಯ ಆಗಿದ್ದೀರಿ.. ಅದೆಷ್ಟೇ ಮುಖ್ಯ ನನಗೆ..’ ಅವನ ಅಂಗೈಯೊತ್ತಿ ಭರವಸೆ ತುಂಬುವಂತೆ ನುಡಿದಳು.

‘ಕತ್ತಲು ತುಂಬಿದ ಈ ಸೂರ್ಯನ ಬದುಕಲ್ಲಿ.. ಬೆಳಕಾಗಿ ಬಂದವ್ಳು ನೀನು ಅಪೂರ್ವ.. ನೀ ಬರದೇ ಹೋಗಿದ್ರೆ.. ಸೂರ್ಯ ಕತ್ತಲಲ್ಲೇ